# ಹಿನ್ನುಡಿ

# ನೀನು ಹೊರಗೆ ಇದ್ದು ಒಳಗೆ ನೋಡುತ್ತಿದ್ದರೆ

*"ಆತ್ಮನೂ ಮದಲಗಿತ್ತಿಯೂ - ಬಾ ಅನ್ನುತ್ತಾರೆ. ಕೇಳುವವನು - ಬಾ ಅನ್ನಲಿ. ಬಾಯಾರಿದವನು ಬರಲಿ. ಇಷ್ಟವುಳ್ಳವನು ಜೀವಜಲವನ್ನು ಕ್ರಯವಿಲ್ಲದೆ ತೆಗೆದುಕೊಳ್ಳಲಿ" (ಪ್ರಕಟನೆ 22:17).*

ನೀನು ಎಲ್ಲಿ ಇರುವಿ? ನೀನು ಕ್ರಿಸ್ತನಲ್ಲಿ ಇರುವಿಯೋ? ಇಲ್ಲವೇ ಆತನ ಹೊರಗೆ ಇರುವಿಯೋ? "ಹೊರಗಿದ್ದು ಒಳಗೆ ನೋಡುವದಕ್ಕಿಂತ, ಒಳಗಿದ್ದು ಹೊರಗೆ ನೋಡುವುದು ಹೆಚ್ಚು ಉತ್ತಮವಾಗಿದೆ" ಎಂಬ ಪಲ್ಲವಿಯನ್ನು ನೀವು ಕೇಳಿರಬಹುದು. ಈ ವಚನವು ಒಂದು ಸೆರೆಮನೆಗೆ ಅನ್ವಯಿಸಿದರೆ, ಅದರೊಂದಿಗೆ ನಾನು ಒಪ್ಪಿಕೊಳ್ಳುವದಿಲ್ಲ - ನಾನು ಹೊರಗಿದ್ದು ಒಳಗೆ ನೋಡುವೆನು; ಒಳಗೆ ಇದ್ದು ಹೊರಗೆ ನೋಡಲು ಬಯಸುವದಿಲ್ಲ. ಹಾಗಿದ್ದರೂ ವಿಷಯವು ಕ್ರಿಸ್ತನ ಸಭೆಯಾಗಿದ್ದರೆ, ಯಾವುದೇ ಪ್ರತಿಬಂಧವಿಲ್ಲದೇ ಸಂಗೀತವನ್ನು ಹಾಡಬಹುದು - ನಾನು ಒಳಗಿದ್ದು ಹೊರಗೆ ನೋಡುವದನ್ನು ಬಯಸುವೆನು.

ಸಭೆಗೆ ಸಂಬಂಧಿಸಿರುವ ಹೊಸ ಒಡಂಬಡಿಕೆಯ ಪರಿಶುದ್ಧ ಬರಹಗಳನ್ನು ಯೋಚಿಸಿದನಂತರ ನಾನು ನಂಬಿದಂತೆ ನೀವು ನಂಬುವಿರಿ. "ಸಭೆಗಾಗಿ" ದೇವರಿಗೆ ಇರುವ ನಕ್ಷೆಯನ್ನು ಯಾರು ಧ್ಯಾನಿಸಬಲ್ಲರು ಮತ್ತು ಅದರ ಭಾಗವಾಗಿರಲು ಬಯಸದೇ ಇರುವರು, ಒಳಗಿದ್ದು ಹೊರಗೆ ನೋಡಲು ಹಿಂಬಾಲಿಸದೇ ಇರುವರು?

ನೀನು ಸಭೆಯ ಹೊರಗೆ ಇದ್ದು ಒಳಗೆ ನೋಡುತ್ತಿದ್ದರೆ, ಇಲ್ಲಿಂದ ನೀನು ಎಲ್ಲಿಗೆ ಹೋಗುವಿ? ಸಭೆಯನ್ನು ನೀನು ಹೇಗೆ ಪ್ರವೇಶಿಸುವಿ ಇಲ್ಲವೇ ಕ್ರಿಸ್ತನ ದೇಹದ ಸದಸ್ಯನು ಹೇಗೆ ಆಗುವಿ?

ಯೇಸುವು ಸಭೆಗೆ ನಮ್ಮನ್ನು ಕೂಡಿಸುತ್ತಾನೆ. ಪದದ ಪ್ರಾಪಂಚಿಕ ಅರ್ಥದಲ್ಲಿ ನೀನು ಅದನ್ನು ಸೇರಲಾರಿ; ಹಾಗಿದ್ದರೂ ಆತನು ಸಂತೋಷದಿಂದ ನಿನ್ನನ್ನು ಅದಕ್ಕೆ ಸೇರಿಸುವನು (ಅಪೊಸ್ತಲರ ಕೃತ್ಯಗಳು 2:47). ಆತನ ವಾಕ್ಯವನ್ನು ಕೇಳಿ ಅದಕ್ಕೆ ವಿಧೇಯರಾದ ಮೊದಲನೆಯ ಶತಮಾನದ ಜನರನ್ನು ಕೂಡಿಸಿದಂತೆ ಆತನು ಕೂಡಿಸುವನು. ವಾಕ್ಯದಲ್ಲಿ ವರ್ಣಿಸಲ್ಪಟ್ಟ ಯೇಸುವನ್ನು ಅವರು ನಂಬಿದರು (ಅಪೊಸ್ತಲರ ಕೃತ್ಯಗಳು 2:41; ರೋಮಾಪುರ 10:17), ಅನುದಿನದ ಜೀವನದಲ್ಲಿ ಕ್ರಿಸ್ತನನ್ನು ಹಿಂಬಾಲಿಸುವಂತೆ ದೃಢವಾಗಿ ಒಪ್ಪಿಕೆಯನ್ನು ಮಾಡಿದಂತೆ ಅವರು ತಮ್ಮ

ಪಾಪಗಳನ್ನು ಅರಿಕೆ ಮಾಡಿದರು (ಅಪೊಸ್ತಲರ ಕೃತ್ಯಗಳು 17:30, 31). ತಮ್ಮ ಹೃದಯಗಳಲ್ಲಿದ್ದ ಕ್ರಿಸ್ತನಲ್ಲಿ ನಂಬಿಕೆಯನ್ನು ದೃಢಪಡಿಸಿಕೊಂಡು, ಯೇಸುವನ್ನು ದೇವರ ಕುಮಾರನು ಎಂದು ತಮ್ಮ ಬಾಯಿಂದ ಅರಿಕೆ ಮಾಡಿದರು (ರೋಮಾಪುರ 10:10), ಮತ್ತು ಅವರು ತಮ್ಮ ಪಾಪಗಳ ಕ್ಷಮಾಪಣೆಗಾಗಿ ಕ್ರಿಸ್ತನಲ್ಲಿ ಮುಳುಗೇಳಿಸುವಿಕೆಯಿಂದ ಬಾಪ್ತಿಸ್ಮ ಮಾಡಿಸಿಕೊಂಡರು (ರೋಮಾಪುರ 6:3; ಅಪೊಸ್ತಲರ ಕೃತ್ಯಗಳು 2:38; 22:16). ತಮಗೆ ಪ್ರಸಂಗಿಸಲ್ಪಟ್ಟ ವಾಕ್ಯಕ್ಕೆ ಅವರು ವಿಧೇಯರಾದಾಗ, ಕ್ರಿಸ್ತನು ಅವರನ್ನು ತನ್ನ ಸಭೆಗೆ ಸೇರಿಸಿದನು (ಅಪೊಸ್ತಲರ ಕೃತ್ಯಗಳು 2:47). ಅವರು ಮಾಡಿದ್ದನ್ನು ಮಾಡು, ಮತ್ತು ಕ್ರಿಸ್ತನು ಅವರಿಗಾಗಿ ಮಾಡಿದ್ದನ್ನು ನಿನಗೂ ಮಾಡುವನು. ಪ್ರಥಮ ಶತಮಾನದಲ್ಲಿ ಅವರನ್ನು ಕ್ರೈಸ್ತರನ್ನಾಗಿ ಮಾಡಿದ ಅದೇ ಸುವಾರ್ತೆಯು ಇಂದು ನಿನ್ನನ್ನೂ ಕ್ರೈಸ್ತನನ್ನಾಗಿ ಮಾಡುವುದು.

ಒಬ್ಬನು ಕ್ರೈಸ್ತನಾಗುವುದು ಹೇಗೆ ಎಂಬುದನ್ನು ತಿಳಿದುಕೊಂಡಿದ್ದು, ಮೊದಲು ಯಾವ ಹೆಜ್ಜೆ ತೆಗೆದುಕೊಳ್ಳಬೇಕೆಂಬುದನ್ನು ತಿಳಿಯದಿದ್ದರೆ, ನಿನಗೆ ಸಮೀಪದಲ್ಲಿರುವ ಒಬ್ಬ ಸುವಾರ್ತಾ ಪ್ರಸಂಗಿಯನ್ನು ಕರೆಕಳುಹಿಸು. ನಿನ್ನ ಟೆಲಿಫೋನ್ ಡೈರಕ್ಟರಿಯಲ್ಲಿ ಕ್ರಿಸ್ತನ ಸಭೆಗಾಗಿ ಯಾದಿಮಾಡಿದ ನಂಬರಿಗೆ ಕರೆ ಮಾಡುವದರಿಂದ ಅವನನ್ನು ನೀನು ಸಂಪರ್ಕಿಸಬಹುದು. ತನ್ನ ಪ್ರೇರೇಪಿತ ವಾಕ್ಯದ ಮುಖಾಂತರ ಒಡೆಯನು ನಮಗೆ ಕೊಟ್ಟ ರಕ್ಷಣೆಯ ಯೋಜನೆಯನ್ನು ಬಿಟ್ಟು ಬೇರೆ ಯಾವುದನ್ನೂ ಒಪ್ಪಿಕೊಳ್ಳಬೇಡಿರಿ. ಆತನ ವಾಕ್ಯಕ್ಕೆ ನೀವು ವಿಧೇಯರಾಗುವಂತೆ ನಿನ್ನ ಪೂರ್ಣಹೃದಯವನ್ನು ಕ್ರಿಸ್ತನಿಗೆ ಕೊಡು, ಆತನು ತನ್ನ ಸಭೆಗೆ ನಿನ್ನನ್ನು ಸೇರಿಸುವನು ಎಂಬ ಭರವಸೆಯನ್ನು ನೀನು ಹೊಂದಬಹುದು. ಆಗ, ಕ್ರಿಸ್ತನಿಗೆ ನಿನ್ನ ವಿಧೇಯತೆಯ ನಂತರ, ಆತನಿಗಾಗಿ ಆತನ ಸಭೆಯಂತೆ ಜೀವಿಸು. ಕ್ರಿಸ್ತನ ಸಭೆಯು ನಿನಗೆ ಸಮೀಪದಲ್ಲಿರದಿದ್ದರೆ ಮುಂದೆ ಕೊಟ್ಟಿರುವ ವಿಳಾಸಕ್ಕೆ ಬರೆ, ನಿನ್ನ ಕ್ಷೇತ್ರದಲ್ಲಿರುವ ಒಬ್ಬರನ್ನು ನಿನ್ನ ಸಹಾಯಕ್ಕಾಗಿ ಯಾರನ್ನಾದರೂ ಕಂಡುಕೊಳ್ಳುವಂತೆ ಮಾಡುವೆವು.

ಯೇಸು ಕಟ್ಟಿದ ಸಭೆಯ ಬಗ್ಗೆ ಹೆಚ್ಚು ಅಧ್ಯಯನ ಮಾಡಲು ನೀನು ಬಯಸಿದರೆ, ಮುಂದೆ ಕೊಟ್ಟಿರುವ ವಿಳಾಸಕ್ಕೆ ಬರೆ ಮತ್ತು ಉಚಿತವಾದ ಬೈಬಲ್ ಕರೆಸ್ಪೊಂಡೆನ್ಸ್ ಕೋರ್ಸಿಗೆ ನಿನ್ನನ್ನು ದಾಖಲೆ ಮಾಡಿಕೊಳ್ಳುವೆವು. ದಯವಿಟ್ಟು ಹೊರಗೆ ನಿಂತುಕೊಂಡು ಒಳಗೆ ನೋಡುವವನಾಗಿರಬೇಡ; ನೀನು ಈಗ ಸಮೃದ್ಧ ಜೀವಿತವನ್ನು ಮತ್ತು ಬರಲಿಕ್ಕಿದ್ದ ಜಗತ್ತಿನಲ್ಲಿ ನಿತ್ಯ ಜೀವವನ್ನೂ ಆನಂದಿಸಲಿಕ್ಕಾಗುವಂತೆ ಕ್ರಿಸ್ತನು ನಿನ್ನನ್ನು ಆತನ ಮಹಿಮೆಯುಳ್ಳ ಸಭೆಗೆ ಸೇರಿಸುವಂತೆ ಬಿಡು.

© 2009 Truth for Today